**2 ನೇ ಅಪರ ನ್ಯಾಯಿಕ ದಂಡಾಧಿಕಾರಿ ಮತ್ತು ಜೆಎಂಎಫ್‌ಸಿ ನ್ಯಾಯಾಲಯ , ಮಾಗಡಿ**

**ಕ್ರಿಮಿನಲ್ ಪ್ರಕರಣ ಸಂಖ್ಯೆ : 3469/2021**

**ಚಾಸಾ :- 04 / ಪ್ರಾಸಾ :- 4**

| | |
|---|---|
| ಹೆಸರು | **ಹುಲಿರಾಜ್** |
| ತಂದೆಯ ಹೆಸರು | **ಕುಮಾರ ಸ್ವಾಮೀ** |
| ವಯಸ್ಸು | **32** |
| ಉದ್ಯೋಗ | **ಮುಖ್ಯ ಪೇದೆ** |
| ವಿಳಾಸ | **ತಾವರೆಕೆರೆ** |

**ದಿನಾಂಕ:18-07-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ :- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ :-**

ನಾನು 2021 ರಿಂದ ಇಲ್ಲಿಯವರೆಗೆ ತಾವರೆಕೆರೆ ಪೋಲೀಸ್ ಠಾಣೆಯಲ್ಲಿ ಮುಖ್ಯ ಪೇದೆಯಾಗಿ ಕಾರ್ಯನಿರ್ವಹಿಸಿದ್ದೇನೆ.

ದಿ.18-09-2021 ರಂದು ರಾತ್ರಿ 9.30 ರ ಸಮಯದಲ್ಲಿ ನಾನು ಠಾಣೆಯಲ್ಲಿ ಇದ್ದಾಗ, ಚಾಸಾ-1 ರವರನ್ನು ರಾತ್ರಿ ಗಸ್ತು ಕಾರ್ಯಕ್ಕೆಂದು ನೇಮಕ ಮಾಡಿದರು. ತಾವರೆಕೆರೆಯ ಪಂಚಮುಖಿ ಗಣೇಶ ದೇವಸ್ಥಾನದ ಬಳಿ ಯಾರೋ ಒಬ್ಬ ವ್ಯಕ್ತಿ ಚಾಸಾ-1 ರವರಿಗೆ ಗಲಾಟೆ ಮಾಡುತ್ತಿದ್ದಾರೆ ಎಂದು ನನಗೆ ಗೊತ್ತಾಯಿತು. ಆಗ ನಾನು ಮತ್ತು ಚಾಸಾ-3 ರವರು ಸ್ಥಳಕ್ಕೆ ಹೋಗಿ ನೋಡಿದಾಗ ಸಮವಸ್ತ್ರದಲ್ಲಿ ಇದ್ದ ಚಾಸಾ-1 ರವರ ಜೊತೆಯಲ್ಲಿ ಗಲಾಟೆಯನ್ನು ಮಾಡಿ ತೊಂದರೆಯನ್ನು ನೀಡುತ್ತಿದ್ದರು. ಆ ವ್ಯಕ್ತಿಯನ್ನು ವಶಕ್ಕೆ ಪಡೆದು ಠಾಣೆಗೆ ಹಾಜರುಪಡಿಸಿರುತ್ತೇನೆ. ತದಾನಂತರ ಘಟನೆಯ ಬಗ್ಗೆ ಚಾಸಾ-1 ರವರನ್ನು ವಿಚಾರಿಸಿದಾಗ, ಅವರು ರಾತ್ರಿ 9.30 ರ ಸಮಯದಲ್ಲಿ ಗಸ್ತುವಿನಲ್ಲಿ ಇರುವಾಗ ತಾವರೆಕೆರೆ ಕಡೆಯಿಂದ ಬೆಂಗಳೂರು ಕಡೆಗೆ ದ್ವಿಚಕ್ರವಾಹನ ಸಂ. ಕೆಎ-41-ಇಕೆ-8931 ರಲ್ಲಿ ಇಬ್ಬರು ವ್ಯಕ್ತಿಗಳು ಇದ್ದರು, ಅವರ ಪೈಕಿ ಹಿಂಬದಿಯಲ್ಲಿ ಕುಳಿತಿದ್ದ ವ್ಯಕ್ತಿಯು ಜೋರಾಗಿ ಕೂಗಾಡಿಕೊಂಡು ಬರುತ್ತಿದ್ದರು. ಆಗ ಚಾಸಾ-1 ರವರು ಸದರಿ ದ್ವಿಚಕ್ರವಾಹವನನ್ನು ತಡೆದು ಸಾರ್ವಜನಿಕರಿಗೆ ತೊಂದರೆ ಕೊಡುವ

ರೀತಿಯಲ್ಲಿ ಏಕೆ ಕೂಗಾಡುತ್ತಿಯಾ ಎಂದು ಕೇಳಿದಾಗ, ನೀವು ಏಕೆ ನನ್ನನ್ನು ತಡೆದು ವಿಚಾರಣೆ ಮಾಡುತ್ತಿರಾ ಎಂದು ಬಾಯಿಗೆ ಬಂದಂತೆ ಬೈದರು. ಚಾಸಾ-1 ರವರನ್ನು ತಳ್ಳಾಡಿದರು ಮತ್ತು ಆ ಸಮಯದಲ್ಲಿ ಚಾಸಾ-1 ರವರು ಮೊಬೈಲ್ ನಲ್ಲಿ ವಿಡಿಯೋವನ್ನು ಮಾಡಲು ಮುಂದಾದಾಗ ಆ ವ್ಯಕ್ತಿ ಮೊಬೈಲ್ ನ್ನು ಕಿತ್ತು ನೆಲಕ್ಕೆ ಎಸೆದು ಚಾಸಾ-1 ರವರ ಕರ್ತವ್ಯಕ್ಕೆ ಅಡ್ಡಿಪಡಿಸಿರುತ್ತಾರೆ. ಸದರಿ ವ್ಯಕ್ತಿಯನ್ನು ವಿಚಾರಿಸಿದಾಗ ಅವರ ಹೆಸರು ಸಂತೋಷ್ ಎಂದು ಗೊತ್ತಾಯಿತು. ಸದರಿ ವಿಷಯಕ್ಕೆ ಸಂಬಂಧಿಸಿದಂತೆ ನಾನು ನನ್ನ ಹೇಳಿಕೆಯನ್ನು ನೀಡಿದ್ದೇನೆ. ನಾನು ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಇಂದು ನ್ಯಾಯಾಲಯದ ಮುಂದೆ ಆರೋಪಿಯು ಹಾಜರಿರುವುದಿಲ್ಲ. ಆರೋಪಿಯನ್ನು ಗುರುತಿಸುವಲ್ಲಿ ಆರೋಪಿಯ ಪರ ವಕೀಲರಿಂದ ಯಾವುದೇ ತಕರಾರು ಇರುವುದಿಲ್ಲ.

**ಪಾಟೀ ಸವಾಲು :- ಆರೋಪಿಯ ಪರ ಶ್ರೀ.ಜಿ. ಹೆಚ್. ಎಂ, ವಕೀಲರಿಂದ :-**

ದಿ.19-09-2021 ರಂದು ನಾನು ನನ್ನ ಹೇಳಿಕೆಯನ್ನು ನೀಡಿರುತ್ತೇನೆ. ನಾನು ಯಾವ ಸಮಯದಲ್ಲಿ ನನ್ನ ಹೇಳಿಕೆಯನ್ನು ನೀಡಿದ್ದೇನೆ ಎಂದು ನನಗೆ ನೆನಪಿಲ್ಲ. ನಾನು ಚಾಸಾ-4 ರವರಿಗೆ ನನ್ನ ಹೇಳಿಕೆಯನ್ನು ನೀಡಿರುತ್ತೇನೆ. ಸದರಿ ಕೃತ್ಯದ ಬಗ್ಗೆ ಚಾಸಾ-1 ರವರೇ ಠಾಣೆಗೆ ಕರೆ ಮಾಡಿ ತಿಳಿಸಿದರು ಮತ್ತು ಸದರಿ ವಿಷಯವನ್ನು ನಾನು ನನ್ನ ಹೇಳಿಕೆಯಲ್ಲಿ ಹೇಳಿರುವುದಿಲ್ಲ. ಕೃತ್ಯ ನಡೆದ ಸಮಯದಲ್ಲಿ ನಾನು ಠಾಣೆಯಲ್ಲಿ ಇದ್ದೇನು. ಸದರಿ ಕೃತ್ಯದ ಬಗ್ಗೆ ಚಾಸಾ-14 ರವರು ನನಗೆ ತಿಳಿಸಿದರು. ನಾನು ಮತ್ತು ಚಾಸಾ-3 ರವರು ರಾತ್ರಿ 9.30 ರ ಸಮಯದಲ್ಲಿ ದ್ವಿಚಕ್ರವಾಹನದಲ್ಲಿ ಕೃತ್ಯ ನಡೆದ ಸ್ಥಳಕ್ಕೆ ಹೋದೆವು. ಸದರಿ ದ್ವಿಚಕ್ರ ವಾಹನದ ಮಾಲೀಕರು ಮತ್ತು ಅದರ ನೋಂದಣಿ ಸಂಖ್ಯೆ ನನಗೆ ಗೊತ್ತಿಲ್ಲ. ನಾನು ಸ್ದಳಕ್ಕೆ ಹೋಗುವ ಸಮಯದಲ್ಲಿ ಇನ್ನೂ ಸಹ ಗಲಾಟೆಯು ನಡೆಯುತ್ತಿತ್ತು. ಗಲಾಟೆ ನಡೆಯುವ ಸಮಯದಲ್ಲಿ ಇಬ್ಬರು ವ್ಯಕ್ತಿಗಳು ಇದ್ದರು ಮತ್ತು ಅವರನ್ನು ಹೊರತುಪಡಿಸಿ ಬೇರೆ ಯಾವುದೇ ಸಾರ್ವಜನಿಕರು

ಇರುವುದಿಲ್ಲ. ಅದರಲ್ಲಿ ಆರೋಪಿ ಮತ್ತು ಇನ್ನೊಬ್ಬರು ಆಗಿರುತ್ತಾರೆ. ಸದರಿ ಇನ್ನೊಬ್ಬರ ಹೆಸರು ನನಗೆ ಗೊತ್ತಿಲ್ಲ.

ದ್ವಿಚಕ್ರವಾಹನವನ್ನು ಯಾರು ಓಡಿಸುತ್ತಿದ್ದರು ಎಂದು ನಾನು ಕೇಳಿ ತಿಳಿದುಕೊಂಡಿರುವುದಿಲ್ಲ. ಕೃತ್ಯವು ಯಾವ ಸಮಯದಿಂದ ಯಾವ ಸಮಯದವರೆಗೆ ನಡೆದಿತ್ತು ಎಂದು ನನಗೆ ಗೊತ್ತಿಲ್ಲ. ಆರೋಪಿಯು ಚಾಸಾ-1 ರವರಿಗೆ ಸೇರಿದ್ದ ಯಾವ ಮೊಬೈಲ್ ನ್ನು ಹೊಡೆದು ಹಾಕಿದರು ಎಂದು ನನಗೆ ಗೊತ್ತಿಲ್ಲ. ಕೃತ್ಯ ನಡೆದ ನಂತರ ನಾನು ಠಾಣೆಗೆ ಹೋದೆನು. ಠಾಣೆಗೆ ನನ್ನ ಜೊತೆ ಚಾಸಾ-1, 3 ಮತ್ತು ಆರೋಪಿಯು ಬಂದರು. ಆ ಸಮಯದಲ್ಲಿ ದ್ವಿಚಕ್ರ ವಾಹನ ಮತ್ತು ಚಾಸಾ-1 ರವರ ಮೊಬೈಲ್ ನ್ನು ಠಾಣೆಗೆ ತೆಗೆದುಕೊಂಡು ಹೋಗಿರುವುದಿಲ್ಲ.

ಚಾಸಾ-1 ರವರಿಗೆ ಗಾಯಗಳು ಆಗಿರುವ ಬಗ್ಗೆ ನನಗೆ ನೆನಪಿರುವುದಿಲ್ಲ. ಕೃತ್ಯ ನಡೆದ ಸಮಯದಲ್ಲಿ ಚಾಸಾ-1 ರವರ ಸಮವಸ್ತ್ರ ಹರಿದಿರುವುದಿಲ್ಲ. ಘಟನೆ ನಡೆದ ಸಮಯದಲ್ಲಿ ನಾನು ಮತ್ತು ಚಾಸಾ-3 ರವರನ್ನು ಹೊರತುಪಡಿಸಿ ಬೇರೆ ಯಾರೂ ಸಹ ಗಲಾಟೆಯನ್ನು ಬಿಡಿಸಲು ಪ್ರಯತ್ನಿಸಲಿಲ್ಲ. ಕೃತ್ಯ ನಡೆಯಿತು ಎಂದು ಹೇಳುವ ಸ್ಥಳವು ಮಾಗಡಿ ಬೆಂಗಳೂರು ಮುಖ್ಯ ರಸ್ತೆ ಆಗಿದ್ದು ಮತ್ತು ಆ ಸಮಯದಲ್ಲಿ ಸಾಕಷ್ಟು ವಾಹನಗಳ ಸಂಚಾರ ಇರುತ್ತದೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಒಂದು ವೇಳೆ ಗಲಾಟೆ ಆಗಿದ್ದೆ ಆದ ಪಕ್ಷದಲ್ಲಿ ಸಾರ್ವಜನಿಕರು ಸದರಿ ಗಲಾಟೆಯನ್ನು ಬಿಡಿಸುತಿದ್ದರು ಎಂದರೆ ಸಾಕ್ಷಿಯು ಅಲ್ಲಿ ಯಾವುದೇ ಸಾರ್ವಜನಿಕರು ಇರಲಿಲ್ಲ ಎನ್ನುತ್ತಾರೆ. ಹೊಡೆದು ಹೋಗಿರುವ ಮೊಬೈಲ್ ನ ಮೊತ್ತವು ಎಷ್ಟು ಎಂದು ನನಗೆ ಗೊತ್ತಿಲ್ಲ. ಹೊಡೆದು ಹೋದ ಮೊಬೈಲ್ ಕೆಲಸ ಮಾಡುತ್ತಿದ್ದ ಬಗ್ಗೆ ನನಗೆ ಯಾವುದೇ ಮಾಹಿತಿ ಇರುದಿಲ್ಲ.

ನೀವು ಯಾವುದೇ ಘಟನೆಯನ್ನು ಕಣ್ಣಾರೆ ನೋಡದೇ ಇದ್ದರೂ ನಿಮ್ಮ ಮೇಲಾಧಿಕಾರಿಗಳ ಮಾತನ್ನು ಕೇಳಿಕೊಂಡು ಸುಳ್ಳು ಸಾಕ್ಷ ಹೇಳುತ್ತಿದ್ದೀರಾ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ.

**ಮರು ವಿಚಾರಣೆ ಇರುವುದಿಲ್ಲ**

**ಓ. ಹೇ. ಕೇ. ಸ. ಇ. ಎ. ಒಪ್ಪಿರುತ್ತಾರೆ,**

**2 ನೇ ಅ. ನ್ಯಾ. ದಂ. ಮತ್ತು ಜೆಎಂಎಫ್‌ಸಿ,**
**ಮಾಗಡಿ**

**2 ನೇ ಅಪರ ನ್ಯಾಯಿಕ ದಂಡಾಧಿಕಾರಿ ಮತ್ತು ಜೆಎಂಎಫ್‌ಸಿ ನ್ಯಾಯಾಲಯ ,**
**ಮಾಗಡಿ**
**ಕ್ರಿಮಿನಲ್ ಪ್ರಕರಣ ಸಂಖ್ಯೆ : 6469/2021**
**ಚಾಸಾ :- 04 / ಪ್ರಾಸಾ :- 4**

| | |
|---|---|
| ಹೆಸರು | **ಹುಲಿರಾಜ್** |
| ತಂದೆಯ ಹೆಸರು | **ಕುಮಾರ ಸ್ವಾಮೀ** |
| ವಯಸ್ಸು | **32** |
| ಉದ್ಯೋಗ | **ಮುಖ್ಯ ಪೇದೆ** |
| ವಿಳಾಸ | **ತಾವರೆಕೆರೆ** |

**ದಿನಾಂಕ:18-07-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ :- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ :-**

ನಾನು 2021 ರಿಂದ ಇಲ್ಲಿಯವರೆಗೆ ತಾವರೆಕೆರೆ ಪೋಲೀಸ್ ಠಾಣೆಯಲ್ಲಿ ಮುಖ್ಯ ಪೇದೆಯಾಗಿ ಕಾರ್ಯನಿರ್ವಹಿಸಿದ್ದೇನೆ.

ದಿ.18-09-2021 ರಂದು ರಾತ್ರಿ 9.30 ರ ಸಮಯದಲ್ಲಿ ನಾನು ಠಾಣೆಯಲ್ಲಿ ಇದ್ದಾಗ, ಚಾಸಾ-1 ರವರನ್ನು ರಾತ್ರಿ ಗಸ್ತು ಕಾರ್ಯಕ್ಕೆಂದು ನೇಮಕ ಮಾಡಿದರು. ತಾವರೆಕೆರೆಯ ಪಂಚಮುಖಿ ಗಣೇಶ ದೇವಸ್ಥಾನದ ಬಳಿ ಯಾರೋ ಒಬ್ಬ ವ್ಯಕ್ತಿ ಚಾಸಾ-1 ರವರಿಗೆ ಗಲಾಟೆ ಮಾಡುತ್ತಿದ್ದಾರೆ ಎಂದು ನನಗೆ ಗೊತ್ತಾಯಿತು. ಆಗ ನಾನು ಮತ್ತು ಚಾಸಾ-3 ರವರು ಸ್ಥಳಕ್ಕೆ ಹೋಗಿ ನೋಡಿದಾಗ ಸಮವಸ್ತ್ರದಲ್ಲಿ ಇದ್ದ ಚಾಸಾ-1 ರವರ ಜೊತೆಯಲ್ಲಿ ಗಲಾಟೆಯನ್ನು ಮಾಡಿ ತೊಂದರೆಯನ್ನು ನೀಡುತ್ತಿದ್ದರು. ಆ ವ್ಯಕ್ತಿಯನ್ನು ವಶಕ್ಕೆ ಪಡೆದು ಠಾಣೆಗೆ ಹಾಜರುಪಡಿಸಿರುತ್ತೇನೆ. ತದಾನಂತರ ಘಟನೆಯ ಬಗ್ಗೆ ಚಾಸಾ-1 ರವರನ್ನು ವಿಚಾರಿಸಿದಾಗ, ಅವರು ರಾತ್ರಿ 9.30 ರ ಸಮಯದಲ್ಲಿ ಗಸ್ತುವಿನಲ್ಲಿ ಇರುವಾಗ ತಾವರೆಕೆರೆ ಕಡೆಯಿಂದ ಬೆಂಗಳೂರು ಕಡೆಗೆ ದ್ವಿಚಕ್ರವಾಹನ ಸಂ. ಕೆಎ-41-ಇಕೆ-8931 ರಲ್ಲಿ ಇಬ್ಬರು ವ್ಯಕ್ತಿಗಳು ಇದ್ದರು, ಅವರ ಪೈಕಿ ಹಿಂಬದಿಯಲ್ಲಿ ಕುಳಿತಿದ್ದ ವ್ಯಕ್ತಿಯು ಜೋರಾಗಿ ಕೂಗಾಡಿಕೊಂಡು ಬರುತ್ತಿದ್ದರು. ಆಗ ಚಾಸಾ-1 ರವರು ಸದರಿ ದ್ವಿಚಕ್ರವಾಹವನನ್ನು ತಡೆದು ಸಾರ್ವಜನಿಕರಿಗೆ ತೊಂದರೆ ಕೊಡುವ

ರೀತಿಯಲ್ಲಿ ಏಕೆ ಕೂಗಾಡುತ್ತಿಯಾ ಎಂದು ಕೇಳಿದಾಗ, ನೀವು ಏಕೆ ನನ್ನನ್ನು ತಡೆದು ವಿಚಾರಣೆ ಮಾಡುತ್ತಿರಾ ಎಂದು ಬಾಯಿಗೆ ಬಂದಂತೆ ಬೈದರು. ಚಾಸಾ-1 ರವರನ್ನು ತಳ್ಳಾಡಿದರು ಮತ್ತು ಆ ಸಮಯದಲ್ಲಿ ಚಾಸಾ-1 ರವರು ಮೊಬೈಲ್ ನಲ್ಲಿ ವಿಡಿಯೋವನ್ನು ಮಾಡಲು ಮುಂದಾದಾಗ ಆ ವ್ಯಕ್ತಿ ಮೊಬೈಲ್ ನ್ನು ಕಿತ್ತು ನೆಲಕ್ಕೆ ಎಸೆದು ಚಾಸಾ-1 ರವರ ಕರ್ತವ್ಯಕ್ಕೆ ಅಡ್ಡಿಪಡಿಸಿರುತ್ತಾರೆ. ಸದರಿ ವ್ಯಕ್ತಿಯನ್ನು ವಿಚಾರಿಸಿದಾಗ ಅವರ ಹೆಸರು ಸಂತೋಷ್ ಎಂದು ಗೊತ್ತಾಯಿತು. ಸದರಿ ವಿಷಯಕ್ಕೆ ಸಂಬಂಧಿಸಿದಂತೆ ನಾನು ನನ್ನ ಹೇಳಿಕೆಯನ್ನು ನೀಡಿದ್ದೇನೆ. ನಾನು ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಇಂದು ನ್ಯಾಯಾಲಯದ ಮುಂದೆ ಆರೋಪಿಯು ಹಾಜರಿರುವುದಿಲ್ಲ. ಆರೋಪಿಯನ್ನು ಗುರುತಿಸುವಲ್ಲಿ ಆರೋಪಿಯ ಪರ ವಕೀಲರಿಂದ ಯಾವುದೇ ತಕರಾರು ಇರುವುದಿಲ್ಲ.

**ಪಾಟೀ ಸವಾಲು :- ಆರೋಪಿಯ ಪರ ಶ್ರೀ.ಜಿ. ಹೆಚ್. ಎಂ, ವಕೀಲರಿಂದ :-**